11)	ಕೆ.ಆರ್.ನಗರ	75 ಕೋಟಿ ಕಾರ್ಯಕ್ರಮ	8.75	-
		ನಬಾರ್ಡ್	105.00	120.00
		ಸಿ.ಆರ್.ಎಫ್	6.00	100.00
		3054 ಯೋಜನೆ	337.50	176.03
		ಕಟ್ಟಡಗಳು	11.62	24.50
		ಒಟ್ಟು	**468.87**	**420.53**
12)	ಪಿರಿಯಾಪಟ್ಟಣ	75 ಕೋಟಿ ಕಾರ್ಯಕ್ರಮ	4.00	-
		ನಬಾರ್ಡ್	185.00	60.00
		ಸಿ.ಆರ್.ಎಫ್	108.00	10.00
		3054 ಯೋಜನೆ	492-79	80.00
		ಒ.ಆರ್.ಎಫ್	-	229.79
		ಕಟ್ಟಡಗಳು	9.00	40.93
		ಒಟ್ಟು	**798.79**	**420.72**

472 (557) ಶ್ರೀ ಸುರೇಶ್ ಎಸ್ ಮಾರಿಹಾಳ್ (ಕಿತ್ತೂರು): ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಕಿತ್ತೂರು ಮತಕ್ಷೇತ್ರದಲ್ಲಿನ ಮುಸ್ಲಿಂ ಸಮುದಾಯದ ಕಾಮಗಾರಿಗಳಿಗೆ 2003–04, 2004–05, 2005–06ನೇ ಸಾಲಿನಲ್ಲಿ ವಕ್ಫ್ ಸಮಿತಿಯಿಂದ ಮಂಜೂರಾದ ಹಣವೆಷ್ಟು (ವಿವರ ನೀಡುವುದು)

ಆ) ಕಿತ್ತೂರು ಮತಕ್ಷೇತ್ರದ ಮುಸ್ಲಿಂ ಸಮುದಾಯದ ಕಾಮಗಾರಿಗಳಿಗೆ ಹಣ ಮಂಜೂರಾತಿ ಕೋರಿ ಬರೆದ ಪತ್ರ ಸಂಖ್ಯೆ: 97: ಕೆಟಿಆರ್:397:05–06, ದಿ: 25.02.06 ರಂದು ಸಲ್ಲಿಸಿದ ಪತ್ರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಪತ್ರದಲ್ಲಿ ಕೋರಿದ ಕಾಮಗಾರಿಗಳಿಗೆ ಯಾವಾಗ ಹಣ ಮಂಜೂರು ಮಾಡಲಾಗುವುದು?

ಶ್ರೀ ಬಿ.ಝೆಡ್. ಜಮೀರ್ ಅಹ್ಮದ್‌ಖಾನ್ (ವಕ್ಫ್ ಸಚಿವರು):

ಅ) ಕಿತ್ತೂರು ಮತಕ್ಷೇತ್ರದಲ್ಲಿನ ಮುಸ್ಲಿಂ ಸಮುದಾಯದ ಕಾಮಗಾರಿಗಳಿಗೆ 2003–04, 2004–05 ಮತ್ತು 2005–06ನೇ ಆರ್ಥಿಕ ವರ್ಷದಲ್ಲಿ ಹಣ ಮಂಜೂರು ಮಾಡಿಲ್ಲ.

ಆ) ಹೌದು.

ಇ) ರಾಜ್ಯದಲ್ಲಿ ಸುಮಾರು 28,000 ನೊಂದಾಯಿತ ವಕ್ಫ್ ಸಂಸ್ಥೆಗಳಿವೆ. ಅನುದಾನ ಕೋರಿ ಬಂದ ಅರ್ಜಿಗಳನ್ನು ಪರಿಶೀಲಿಸಿ ಲಭ್ಯವಿರುವ ಹಣದಿಂದ ಅನುದಾನವನ್ನು ಹಂಚಿಕೆ

ಮಾಡಲಾಗುತ್ತದೆ. 2005–06ನೇ ಸಾಲಿಗೆ ಈಗಾಗಲೇ ಲಭ್ಯವಿದ್ದ ಹಣವನ್ನು ವಿತರಿಸಲಾಗಿದೆ. 2006–07ನೇ ಸಾಲಿನಲ್ಲಿ ವಕ್ಫ್ ಸಂಸ್ಥೆಗಳು ಅನುದಾನಕ್ಕಾಗಿ ಕೋರಿಕೆ ಸಲ್ಲಿಸಿದಾಗ ಅಂತಹ ಕೋರಿಕೆಗಳನ್ನು ಅನುದಾನ ಲಭ್ಯತೆ ಹಾಗೂ ಬಂದ ಅರ್ಜಿಗಳನ್ನು ಗಮನಕ್ಕೆ ತೆಗೆದುಕೊಂಡು ಪರಿಶೀಲಿಸಿ ಈ ಬಗ್ಗೆ ಮುಂದಿನ ಕ್ರಮ ಜರುಗಿಸಲಾಗುವುದು.

473 (559) ಶ್ರೀ ಸುರೇಶ್ ಎಸ್ ಮಾರಿಹಾಳ್ (ಕಿತ್ತೂರು): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಬೈಲಹೊಂಗಲ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಕಿತ್ತೂರು, ಬೈಲಹೊಂಗಲ ಮತಕ್ಷೇತ್ರದಲ್ಲಿ ವಿದ್ಯುತ್ ಟಿ.ಸಿ.ಗಳು ಸುಟ್ಟಾಗ ಅವುಗಳ ರಿಪೇರಿ ಕಾರ್ಯ ವಿಳಂಬವಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ) ಹಾಗಿದ್ದಲ್ಲಿ, ಬೈಲಹೊಂಗಲಕ್ಕೆ ವಿದ್ಯುತ್ ರಿಪೇರಿ ಕಾರ್ಯಾಗಾರವನ್ನು ಮಂಜೂರು ಮಾಡುವಂತೆ ಕೋರಿದ ಪತ್ರ ಸರ್ಕಾರದ ಗಮನಕ್ಕೆ ಬಂದಿದೆಯೇ:

ಇ) ಹಾಗಿದ್ದಲ್ಲಿ, ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಹೆಚ್.ಡಿ.ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು):

ಅ) ಪ್ರಸ್ತುತ ಬೈಲಹೊಂಗಲ ವಿಭಾಗ ವ್ಯಾಪ್ತಿಯಲ್ಲಿ ಸುಟ್ಟ ಟ್ರಾನ್ಸ್‌ಫಾರ್ಮರ್‌ಗಳನ್ನು ಬೆಳಗಾವಿಯಲ್ಲಿರುವ ಟ್ರಾನ್ಸ್‌ಫಾರ್ಮರ್ ರಿಪೇರಿ ಕೇಂದ್ರದಲ್ಲಿ ದುರಸ್ತಿಗೊಳಿಸಲಾಗುತ್ತಿರುವುದರಿಂದ, ಸುಟ್ಟ ಟ್ರಾನ್ಸ್ ಫಾರ್ಮರ್‌ಗಳ ರಿಪೇರಿ ಕಾರ್ಯದಲ್ಲಿ ಸ್ವಲ್ಪ ಮಟ್ಟಿಗೆ ವಿಳಂಬವಾಗುತ್ತಿರುವುದು ಗಮನಕ್ಕೆ ಬಂದಿದೆ.

ಇ) ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯಿಂದ ಬೈಲಹೊಂಗಲದಲ್ಲಿ ಒಂದು ಟ್ರಾನ್ಸ್‌ಫಾರ್ಮರ್ ರಿಪೇರಿ ಕೇಂದ್ರವನ್ನು ಆರಂಭಿಸಲು ನಿರ್ಣಯಿಸಿದ್ದು, ಈ ನಿಟ್ಟಿನಲ್ಲಿ ಟೆಂಡರ್ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗಿದೆ.

474 (750) ಶ್ರೀ ವಾಟಾಳ್ ನಾಗರಾಜ್, (ಚಾಮರಾಜನಗರ):ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಬೆಂಗಳೂರು ನಗರದ ಸಮಗ್ರ ಅಭಿವೃದ್ಧಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು:

ಆ) ಬೆಂಗಳೂರು ನಗರದಲ್ಲಿ ಆಗಾಗ ಮಳೆ ಹಾನಿಯಿಂದ ಅನೇಕ ಪ್ರದೇಶಗಳು ಜಲಾವೃತವಾಗಿತೊಂದರೆಗೊಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಇ) ಬೆಂಗಳೂರು ನಗರದ ಈಗಿನ ಜನಸಂಖ್ಯೆ ಎಷ್ಟು:

ಈ) ಬೆಂಗಳೂರು ನಗರದ ಮುಂದುವರೆದ ಬಡಾವಣೆ ಹಾಗೂ ಹಿಂದುಳಿದ ಬಡಾವಣೆಗಳಲ್ಲಿ ಚರಂಡಿ ವ್ಯವಸ್ಥೆಯನ್ನು ಸರಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಉ) ಬೆಂಗಳೂರು ನಗರದ ಪರಿಸರವನ್ನು ಸರಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?